## ಪದಬಂಧ



### ಎಡದಿಂದ ಬಲಕ್ಕೆ

1. ಆಕೆಯ ಸಂಗಾತಿ ಎಲ್ಲರನ್ನೂ ನಗಿಸುವ ವಿದೂಷಕ 4
3. ಎಲ್ಲರಿಗೂ ತೋರಿಸಿ; ಇದು ಗಟ್ಟಿಯಾದ ಕಾಂಕ್ರೀಟ್ ಮೇಲ್ಹಾವಣಿ 3
4. ಮಾಣಿಕ್ಯದ ಆ ಹರಳಿನದು ಅಬ್ಬ, ಎಂಥ ಹೊಳಪು! 3
6. ಗಣಿಯ ಕಾರ್ಯಗಾರನಿಗೆ ಈತ ತುಂಬ ವಿಶ್ವಾಸದ ಸ್ನೇಹಿತ 4
7. ಮುದ್ರಿಸಲಾಗದ್ದನ್ನೆಲ್ಲ ನುಂಗಿ ಹಾಕಿತು ಕಡಲು 3
9. ಕಿಂಚಿತ್ತೂ ಆಡಂಬರವಿಲ್ಲದ ಸುಂದರ ಅರಣ್ಯ 3
11. ಸೋಮಾರಿಗಳೂ ಮೇಲೇಳುವಂತೆ ಬೀಸಿ ಬಂದ ಗಾಳಿ 3
13. ನಿನ್ನದೇ ಇರುವಂತಿದೆ ಈ ಧ್ವನಿ, ಶಬ್ದ 3
15. ಈ ಅನ್ಯಾಯವನ್ನು ಸರಿಪಡಿಸಲು ಆಯಾಸ ಕಿಂಚಿತ್ತೂ ಇರದು 4
17. ದೈವ ಕೃಪೆ ಒದಗಿರುವುದು ಸುದರ್ಶನನ ಅದೃಷ್ಟ 3
18. ಮೊಸರನ್ನು ಹೊತ್ತು ಮಾರಲು ತಕ್ಕಂತಿದೆ ಆಕೆಯ ತಲೆ 3
19 ನೀಚ ಜನರೆಲ್ಲ ಅದೇಕೋ ರಾತ್ರಿಯಲ್ಲೇ ಓಡಾಡುವವರಾಗಿದ್ದಾರೆ 4

### ಮೇಲಿನಿಂದ ಕೆಳಕ್ಕೆ

1. ಹೊಸಬರಿಗೆಲ್ಲ ಒದಗಿಸಲಾಯಿತು ಮಲಗುವ ಮೆತ್ತೆ 3
2. ತನ್ನೂರಿನ ಕುರಿತೇ ಏನನ್ನೂ ತಿಳಿದಿಲ್ಲದ ಪೆದ್ದ 3
3. ನದಿಯ ತಳ ಮುಟ್ಟಿ ಮೇಲೆದ್ದು ಬರುವ ಸಾಹಸದ ಅಭ್ಯಾಸ ನಡೆದಿದೆ 3
5. ಕಡೂರಿನಲ್ಲಿ ಕಂಡಿದ್ದ ಈ ವ್ಯಕ್ತಿ ದೃಷ್ಟಿ ಶಕ್ತಿ ಇಲ್ಲದಾತ 3
7. ಹವಾ ತಜ್ಞನ ಸೊಸೆಯದು ಸದಾ ಒಳ್ಳೆಯವರ ಜೊತೆಗೇ ವಾಸ್ತವ್ಯ 4
8. ವಿಹಾರಕ್ಕೆಂದು ಹೋದಲ್ಲೆಲ್ಲ ಆಕೆಗೆ ಬೇಕು ಕರಗಿದ ರೂಪದ ಊಟ 4
9. ಅಮ್ಮನ ಅಭೀಷ್ಟಗಳ ಬಗೆಗೆ ಸದಾ ಹೆಮ್ಮೆಪಡುವವ ಈತ 4
10. ಶಾರದೆಯ ಕೃಪೆಯಿಂದ ಈತ ವಿದ್ಯೆಯಲ್ಲಿ ಮಹಾನ್ ಪಂಡಿತ 4
12. ಮರೆಯಲ್ಲೇ ಇದ್ದು ಇತರ ಎಲ್ಲರ ಸಾಧನೆಯನ್ನೂ ದಾಟಿ ನಡೆ 3
14. ಕಾವಿಯನ್ನು ಧರಿಸಿಯೂ ಹಡಗನ್ನೇ ಮುನ್ನಡೆಸುವವ ಈತ 3
15. ಯಾವನಿಗಾದರೂ ಅಷ್ಟೆ. ಇರುವುದು ಇದೊಂದೇ ಭೂಮಿ 3
16. ಸುಮ್ಮನೆ ಇರಬಹುದಿತ್ತು, ಆದರೂ ನಡೆದಿದೆ ಯುದ್ಧ 3

### 23–01–2025 ಉತ್ತರಗಳು

**ಎಡದಿಂದ ಬಲಕ್ಕೆ**

1. ಅಸ್ಥಿರ 3. ನಿರಭ್ರ 4. ಮೇದಿನಿ 6. ಸಹಾಯಕ 7. ಯಜಮಾನ 9. ತರಾತುರಿ 11. ಕರಿಬೇವು 15. ಕಿತ್ತಾಟ 16. ಪ್ರಾರಂಭ 17. ಕಳಿಸಿ

**ಮೇಲಿನಿಂದ ಕೆಳಕ್ಕೆ**

1. ಅಭ್ರಕ 2. ರಮೇಶ 3. ನಿರ್ದಯ 5. ನಿಸ್ತೇಜ 6. ಸಮೇತ 8. ನಲಿವು 10. ತುಪಾಕಿ 12. ರಿಷಭ 13. ಕಂಟಕ 14. ಚಪ್ರಾಸಿ

**ಪ್ರಶ್ನಾಂಕಣ**

## ಮಾನವ ಪ್ರಭೇದಗಳಲ್ಲೆಲ್ಲ ನಾವಷ್ಟೇ ಉಳಿದಿರುವುದು ಹೇಗೆ?

ನಮ್ಮ ಪ್ರಭೇದವಾದ ಹೋಮೊ ಸೇಪಿಯನ್ ಅನ್ನೂ ಸೇರಿಸಿದಂತೆ ಭೂಮಿಯಲ್ಲಿ ಈವರೆಗೆ ಹತ್ತು ಮಾನವ ಪ್ರಭೇದಗಳು ಅವತರಿಸಿವೆ (ಕೆಲ ಪ್ರಭೇದಗಳು ಚಿತ್ರಗಳಲ್ಲಿವೆ). ಆ ಪೈಕಿ ಎರಡು ಪ್ರಭೇದಗಳು (ಹೋಮೊ ಹ್ಯಾಬಿಲಿಸ್ ಮತ್ತು ಹೋಮೊ ರುಡೋಲ್ಫೆನ್ಸಿಸ್) ಹೋಮೊ ಸೇಪಿಯನ್‌ಗಿಂತಲೂ ಮೊದಲೇ, ಎಂದರೆ ಮೂರು ಲಕ್ಷ ವರ್ಷಗಳಿಗಿಂತಲೂ ಮೊದಲೇ, ಅವತರಿಸಿ, ಬಾಳುವೆ ನಡೆಸಿ ಅಂತ್ಯ ಕಂಡಿವೆ. ಐದು ಪ್ರಭೇದಗಳು (ಹೋಮೊ ಇರೆಕ್ಟಸ್, ಹೋಮೊ ಹೈಡೆಲ್ಬರ್ಗೆನ್ಸಿಸ್, ಹೋಮೊ ಫ್ಲಾರೆಸಿಯೆನ್ಸಿಸ್, ಹೋಮೊ ನಿಯಾಂಡರ್ಥಾಲೆನ್ಸಿಸ್ ಮತ್ತು ಹೋಮೊ ನಾಲೆಡಿ) ನಮಗಿಂತ ಮೊದಲೇ ಅವತರಿಸಿ, ನಮಗೆ ಸಮಕಾಲೀನರಾಗಿಯೂ ಒಂದಷ್ಟು ಕಾಲ ಇದ್ದು ಅಳಿದುಹೋಗಿವೆ. ಇನ್ನು ಎರಡು ಪ್ರಭೇದಗಳು (ಹೋಮೊ ಲೋಂಗಿ ಮತ್ತು ಹೋಮೊ ಲೂಜೋನೆನ್ಸಿಸ್) ನಮ್ಮ ನಂತರ ಅವತರಿಸಿ, ಸ್ವಲ್ಪ ಕಾಲ ನಮ್ಮ ಸಮಕಾಲೀನರಾಗಿಯೂ ಇದ್ದು ಈಗಾಗಲೇ ಸಂಪೂರ್ಣ ಕಣ್ಮರೆಯಾಗಿವೆ! ಹಾಗಾಗಿ ಪ್ರಸ್ತುತ ಧರೆಯಲ್ಲಿ ಉಳಿದಿರುವುದು ನಮ್ಮ ಪ್ರಭೇದ (ಎಂದರೆ ಹೋಮೊ ಸೇಪಿಯನ್) ಮಾತ್ರ! ಏಕೆ ಹೀಗೆ? ಉಳಿದೆಲ್ಲ ಪ್ರಭೇದಗಳೂ ಹೀಗೆ ನಿರ್ನಾಮವಾಗಲು ಏನು ಕಾರಣ?

ತುಂಬ ಕುತೂಹಲದ ಈ ಪ್ರಶ್ನೆಗೆ ಸ್ಪಷ್ಟ ಉತ್ತರ ಇನ್ನೂ ಸಿಕ್ಕಿಲ್ಲ. ಆದರೂ ಪರೋಕ್ಷ ಆಕರಗಳನ್ನಾಧರಿಸಿ ಅಭ್ಯಸಿಸಿ, ಚರ್ಚಿಸಿ ಪಳೆಯುಳಿಕೆ ತಜ್ಞರು ಮತ್ತು ಮಾನವ ಶಾಸ್ತ್ರಜ್ಞರು ಈ ಕುರಿತು ಕೆಲವು ಸಿದ್ಧಾಂತಗಳನ್ನು ರೂಪಿಸಿದ್ದಾರೆ:




- ಅವೆಲ್ಲ ಪ್ರಭೇದಗಳ ಮನುಷ್ಯರು ಚಿಕ್ಕ ಚಿಕ್ಕ ಗುಂಪುಗಳಲ್ಲಿ ಜೀವಿಸಿದ್ದರು (ಚಿತ್ರ 2). ಪ್ರತಿ ಗುಂಪೂ ಬೇರಾವ ಗುಂಪಿನೊಡನೆಯೂ ಬೆರೆಯುತ್ತಿರಲಿಲ್ಲ. ಹಾಗಾಗಿ ಪ್ರತಿ ಗುಂಪಿನಲ್ಲೂ ರಕ್ತ ಸಂಬಂಧಿಗಳಿಂದಲೇ ಜನಿಸುತ್ತಿದ್ದ ಮಕ್ಕಳು ಆರೋಗ್ಯವಂತರಾಗಿ ಇರುತ್ತಿದ್ದುದೇ ಅಪರೂಪ; ಶೈಶವದಲ್ಲೇ ಮೃತರಾಗುತ್ತಿದ್ದ ಮಕ್ಕಳ ಸಂಖ್ಯೆಯೇ ಹೆಚ್ಚು.
- ಈಗಿನ ಯೂರೋಪ್, ಆಫ್ರಿಕಾ ಮತ್ತು ಏಷ್ಯಾ ಪ್ರದೇಶಗಳಲ್ಲಿ ಅಲ್ಲಲ್ಲಿ ಬದುಕಿದ್ದ ಈ ಪ್ರಭೇದಗಳು ಕ್ಷಿಪ್ರವಾಗಿ ಬದಲಾಗುತ್ತಿದ್ದ ವಾಯುಗುಣ ಬದಲಾವಣೆಗಳಿಗೆ ಹೊಂದಿಕೊಳ್ಳಲಾಗದೆಯೂ ಸಾಯುತ್ತಿದ್ದರು.
- ಈ ಯಾವ ಪೂರ್ವ ಪ್ರಭೇದಗಳ ಮನುಷ್ಯರೂ ನಮ್ಮಷ್ಟು ಬುದ್ಧಿವಂತರಾಗಿರಲಿಲ್ಲ; ಸಂಪರ್ಕ ಭಾಷೆಯಾಗಲೀ, ಸಹಕರಿಸುವ ಗುಣವಾಗಲೀ ಇರಲಿಲ್ಲ. ಆಹಾರದ ಕೊರತೆ ಮತ್ತು ಅನಾರೋಗ್ಯಗಳಿಗೂ ಬಲಿಯಾಗುತ್ತಿದ್ದವರೇ ಹೆಚ್ಚು.
- ಬುದ್ಧಿವಂತರಾಗಿದ್ದ ನಮ್ಮ ಪ್ರಭೇದದ ಮನುಷ್ಯರು ತಮಗೆದುರಾಗಿ ಬಂದ ಇತರ ಪ್ರಭೇದಗಳ ಮನುಷ್ಯರನ್ನು ಶತ್ರುಗಳೆಂದು ಭಾವಿಸಿ ಧ್ವಂಸ ಮಾಡುತ್ತಿದ್ದರು! ಅದೂ ಇತರ ಪ್ರಭೇದಗಳ ಅಳಿವಿಗೆ ಒಂದು ಪ್ರಮುಖ ಕಾರಣ.

■ ಎನ್. ವಾಸುದೇವ್